
# ಚೇರಮಾನ್ ಪೆರುಮಾಳ್ ನಾಯನಾರ್ ಮತ್ತು ಸುಂದರರ್

ಕಥೆ : ಟಿ.ಎಂ.ಸುಂದರರಾಮನ್ ಚಿತ್ರ : ಶಂಕರ್

**1** ಸುಂದರಮೂರ್ತಿ ನಾಯನಾರರ ಮಧುರವಾದ ಸ್ತೋತ್ರಗಳನ್ನು ಕೇಳಿ ತಿಲ್ಲೈ ಕ್ಷೇತ್ರದ ನಟರಾಜ ದೇವರು ತನ್ನ ಕಡಗದ ಧ್ವನಿ ಮಾಡುವುದನ್ನೇ ಮರೆತನು ಎಂದರಿತ ಚೇರಮಾನ್, ಸುಂದರರನ್ನು ಕಾಣಬಯಸಿದನು. ಅವನು ತಿರುವಂಜಿಕ್ಕಾಲಂನಿಂದ ತಿರುವಾರೂರಿಗೆ ಹೊರಟ; ಹಲವು ತೀರ್ಥಕ್ಷೇತ್ರಗಳನ್ನು ಸಂದರ್ಶಿಸಿ, ತಿರುವಾರೂರನ್ನು ತಲುಪಿದ. ಇತ್ತ ತಿಲ್ಲೈ ಕ್ಷೇತ್ರದಲ್ಲಿ ...





**2**






**3** ಚೇರಮಾನ್ ಪೆರುಮಾಳ್ ಅಲ್ಲಿ 'ಪೊನ್‌ವನ್ನ ತಿರು ಅಂದಾದಿ' ಎಂಬ ಪ್ರಸಿದ್ಧ ಸ್ತುತಿಯನ್ನು ಮಾಡಿದ. ಹಾಡಿನ ಕೊನೆಯಲ್ಲಿ ನಟರಾಜನ ಕಡಗದ ಧ್ವನಿ ಕೇಳಿಸಿತು. ಅಲ್ಲಿ ನೆರೆದಿದ್ದ ಜನರೆಲ್ಲರೂ ಆ ಧ್ವನಿಯನ್ನು ಕೇಳಿ ಆನಂದಗೊಂಡರು.





**4** ಚೇರಮಾನ್ ತಿಲ್ಲೈನಲ್ಲಿ ಹಲವು ಪುಣ್ಯಕ್ಷೇತ್ರಗಳನ್ನು ಸಂದರ್ಶಿಸಿ, ಕೊನೆಗೆ ತಿರುವಾರಿಗೆ ಹೋಗಿ ಸುಂದರರನ್ನು ಭೇಟಿಯಾದ.


5
ಪ್ರಿಯ ಶಿವಭಕ್ತರೇ, ನಿಮಗೆ ಸ್ವಾಗತ. ನಿಮ್ಮ ಭೇಟಿ ಸಾರ್ಥಕವಾಗಲಿ!
ಸ್ವಾಮಿ, ನಿಮ್ಮ ಸ್ತುತಿಯನ್ನು ಕೇಳಿ ಮೈಮರೆತ ನಟರಾಜ ಶಿವನು ತನ್ನ ನರ್ತನವನ್ನೇ ನಿಲ್ಲಿಸಿ, ಸ್ತುತಿ ಮುಗಿದ ನಂತರವೇ ನಾಟ್ಯವನ್ನು ಮುಂದುವರಿಸಿದ ಎಂದು ಕೇಳಿದೆ.
ನನ್ನ ಸ್ತೋತ್ರವು ಶಿವನಿಗೆ ಅಷ್ಟೊಂದು ಆನಂದವನ್ನು ನೀಡಿತೆ? ಶಿವನು ಅತ್ಯಂತ ಕರುಣಾಮಯ. ನಾನು ನಿಜಕ್ಕೂ ಧನ್ಯ. ದಯವಿಟ್ಟು ನನ್ನ ಮನೆಗೆ ಬನ್ನಿ ಸ್ವಾಮಿ.
6
ಸುಂದರರು ತಮ್ಮ ಸ್ನೇಹಿತರೊಡನೆ ತನ್ನ ಪತ್ನಿ ಪರವೈಯಾರ್ ಮನೆಗೆ ಹೋದರು.
ಪರವೈಯಾರ್ ಅವರಿಬ್ಬರನ್ನೂ ಅತ್ಯಂತ ಗೌರವದಿಂದ ಬರಮಾಡಿಕೊಂಡಳು.
ಪರವೈ, ಇಂದು ನನ್ನ ಸ್ನೇಹಿತರೊಂದಿಗೆ ಮಾತನಾಡುವ ಭಾಗ್ಯ ನನಗೆ ಲಭಿಸಿತು. ಅವರಿಗೆ ಭೂರಿಭೋಜನವನ್ನು ತಯಾರು ಮಾಡು.
7
ಸ್ನೇಹಿತರೇ, ಪಾಂಡ್ಯದೇಶಕ್ಕೆ ಹೋಗಿ, ಮದುರೈ ಮುಂತಾದ ದಿವ್ಯ ಕ್ಷೇತ್ರಗಳನ್ನು ಸಂದರ್ಶಿಸಬೇಕೆಂದು ನನ್ನ ಮನಸ್ಸು ಬಯಸುತ್ತದೆ.
ನಾನು ನಿಮ್ಮೊಂದಿಗೆ ಬರುವುದು ಸಾಧ್ಯವಾದರೆ ನಾನೇ ಧನ್ಯ.
8
ಅವರಿಬ್ಬರೂ ತಿರುವೈಯಾರಿಗೆ ಹೋದರು. ಆಗ ಕಾವೇರಿ ನದಿಯಲ್ಲಿ ನೆರೆ ಬಂದಿತ್ತು. ಇಬ್ಬರೂ ದಡದಲ್ಲಿ ನಿಂತು. . . . . .
ಸುಂದರರೇ, ನಿಮ್ಮೊಂದಿಗೆ ಹಲವು ದಿನಗಳನ್ನು ಕಳೆದ ನಾನೇ ಭಾಗ್ಯಶಾಲಿ. ಬನ್ನಿ, ನಾವು ತಿರುವೈಯಾರು ಪಂಚನಂದೀಶ್ವರನ ದರ್ಶನ ಮಾಡೋಣ.
ಅಯ್ಯೋ! ಕಾವೇರಿ ನದಿಯಲ್ಲಿ ನೆರೆ ಉಕ್ಕಿ ಬಂದಿದೆ. ಓ ಪಂಚನಂದೀಶ್ವರ! ನಿನ್ನ ದರ್ಶನವನ್ನು ನಾವು ಹೇಗೆ ಪಡೆಯಲಿ?
ಸುಂದರರು ಆ ಕೂಡಲೇ ಒಂದು ಸ್ತೋತ್ರವನ್ನು ರಚಿಸಿ ಹಾಡಿದರು. ಆಗ ಕಾವೇರಿ ನದಿ ನೆರೆಯನ್ನು ಪಶ್ಚಿಮ ಭಾಗಕ್ಕೆ ಹರಿಯಿಸಿ, ಅವರಿಬ್ಬರೂ ನದಿಯನ್ನು ದಾಟಿ ಹೋಗುವಂತೆ ಮಾಡಿದರು. ಅವರು ದರ್ಶನ ಪಡೆದು ಹಿಂದಿರುಗುವಾಗಲೂ ಕಾವೇರಿ ನದಿ ಅದೇ ರೀತಿ ಮಾಡಿತು.


9
ಅವರಿಬ್ಬರೂ ಮದುರೈಗೆ ಹೋದರು. ಪಾಂಡ್ಯ ದೊರೆ ಇಡೀ ಮದುರೈ ನಗರವನ್ನು ಅಲಂಕರಿಸಿ ಸ್ವಾಗತಿಸಿದ.
ನೀವಿಬ್ಬರೂ ಬಂದದ್ದರಿಂದ ಪಾಂಡ್ಯ ರಾಜ್ಯ ಧನ್ಯವಾಯಿತು. ನಮ್ಮ ರಾಜ್ಯದ ಪಾಲಿಗೆ ಇದು ಬಂಗಾರವಾದಂಥ ದಿನ.
ನಿಮ್ಮ ಸ್ವಾಗತಕ್ಕೆ ನಾವು ಅಭಾರಿಗಳು ಗೌರವಾನ್ವಿತ ಚೋಳ ದೊರೆ ಕೂಡ ಇಲ್ಲಿದ್ದಾರೆ...
ಇಬ್ಬರು ಶ್ರೇಷ್ಠ ಶಿವಭಕ್ತರಾದ ನಿಮ್ಮಿಬ್ಬರನ್ನು ನೋಡಿ ನಾವು ಧನ್ಯರಾದೆವು. ನಾವು ಚೊಕ್ಕನಾಥ ದೇವರ ದರ್ಶನ ಪಡೆಯೋಣ.
10
ಚೊಕ್ಕೇಶ ದೇವಾ! ನಿನ್ನ ಆಜ್ಞೆಗೆ ಕುಬೇರನೂ ಕಾದು ನಿಂತಿರುತ್ತಾನೆ. ಅಂಥದರಲ್ಲಿ ನನ್ನ ಮೇಲೆ ಕೃಪೆ ತೋರಿ ದರ್ಶನ ನೀಡಿರುವೆ. ನಿನ್ನ ದಯೆಯನ್ನು ಪದಗಳಿಂದ ವರ್ಣಿಸಲಾರೆ. ನಿಮ್ಮ ಕರುಣೆಯನ್ನು ನಾನು ಹೇಗೆ ಹಾಡಲಿ?
ಅನಂತರ ಮೂವರು ಮಹಾನ್ ದೊರೆಗಳು ನಂಬಿ ಅರುಣನ್ ಅವರೊಂದಿಗೆ ಹಲವು ಪುಣ್ಯಕ್ಷೇತ್ರಗಳನ್ನು ಸಂದರ್ಶಿಸಿದರು. ಸುಂದರರ್ ಕೆಲವು ಕಾಲ ಚೇರಮಾನ್ ಪೆರುಮಾಳ್ ಜೊತೆಗೆ ತಿರುವಚಿಕ್ಕಾಲಂನಲ್ಲಿ ಇದ್ದು, ಬಳಿಕ ಕೈಲಾಸಕ್ಕೆ ಹೋಗಬೇಕೆಂದು ಇಚ್ಛಿಸಿದರು.
11
ನೀನು ಭೂಮಿಗೆ ಹೋಗಿ ನನಗೆ ಪ್ರಿಯನಾದ ಸುಂದರನನ್ನು ಐರಾವತದ ಮೇಲೆ ಕುಳ್ಳಿರಿಸಿ ಕರೆದು ಕೊಂಡು ಬಾ.
ನೀವು ಹೇಳಿದಂತೆಯೇ ಮಾಡುತ್ತೇನೆ, ಪ್ರಭು!
12
ಕೈಲಾಸಪತಿಯನ್ನು ಭೇಟಿಯಾಗುವ ಈ ಆನಂದದ ಸಮಯದಲ್ಲಿ ನನ್ನ ಸ್ನೇಹಿತ ಚೇರಮಾನ್ ಕೂಡ ನನ್ನೊಂದಿಗೆ ಇದ್ದಿದ್ದರೆ ಎಷ್ಟು ಚೆನ್ನಾಗಿತ್ತು!




''ಹಣವನ್ನು ತೆಗೆದುಕೊಳ್ಳಿ, ಹಣವಿರುವುದು ಒಳ್ಳೆಯದು. ಅದನ್ನು ಸಂಪಾದಿಸಿ, ಅದಕ್ಕಾಗಿ ಕಷ್ಟಪಡಿ ಎನ್ನುವವನು ಕೃಷ್ಣ; ಆದರೆ ಆಸಕ್ತರಾಗಬೇಡಿ ಎನ್ನುವವನು. ಇದರಂತೆಯೇ ಮಕ್ಕಳು, ಗಂಡಹೆಂಡತಿ, ಬಂಧುಬಳಗ, ಕೀರ್ತಿ ಮುಂತಾದವು ಕೂಡ. ಅವನ್ನು ನೀವು ತ್ಯಜಿಸಬೇಕಾಗಿಲ್ಲ. ಆದರೆ ಅದರಲ್ಲಿ ಆಸಕ್ತರಾಗಬೇಡಿ.

ಒಬ್ಬರಲ್ಲಿ ಮಾತ್ರ ಆಸಕ್ತರಾಗಿರಬೇಕು. ಅದು ದೇವರಲ್ಲಿ, ಅನ್ಯರಲ್ಲಿ ಅಲ್ಲ. ಅವರಿಗಾಗಿ ಕೆಲಸ ಮಾಡಿ, ಅವರಿಗೆ ಒಳ್ಳೆಯದನ್ನು ಮಾಡಿ, ಅವರನ್ನು ಪ್ರೀತಿಸಿ, ಅವರಿಗಾಗಿ ಸಾಧ್ಯವಾದರೆ ನೂರು ಜನ್ಮಗಳನ್ನಾದರೂ ಅರ್ಪಿಸಿ, ಆದರೆ ಎಂದಿಗೂ ಆಸಕ್ತರಾಗಬೇಡಿ.''

– ಸ್ವಾಮಿ ವಿವೇಕಾನಂದ.

